# ಪರ್ಯಾಯ ಶೈಕ್ಷಣಿಕಯೋಜನೆ : 2021–22

**ತರಗತಿ : 10** **ತಿಂಗಳು : ಡಿಸೆಂಬರ್** **ವಿಷಯ : ದ್ವಿತೀಯ ಭಾಷೆ–ಕನ್ನಡ**

| ಕ್ರ.ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1 | **ಡಿಸೆಂಬರ್** ಮೊದಲನೆಯ ವಾರ | **ಗುರಿ**<br>• ನಿರ್ದಿಷ್ಟ ವಿಷಯದ ಬಗ್ಗೆ ಸ್ವಂತ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದು. | • ತಮ್ಮ ಜೀವನದ ಗುರಿ ಹಾಗೂ ಅದನ್ನು ಆಯ್ಕೆ ಮಾಡಿಕೊಳ್ಳಲು ಕಾರಣವಾದ ಅಂಶಗಳ ಕುರಿತು ಮಾತನಾಡುವಂತೆ ವಿದ್ಯಾರ್ಥಿಗಳನ್ನು ಪ್ರೇರೇಪಿಸುವುದು. | |
| | | • ಮುಖ್ಯಾಂಶಗಳನ್ನು ಆಧರಿಸಿ ವಾಕ್ಯ ರಚಿಸುವುದು | • ಕವಿಯ ಕಾಲ, ಸ್ಥಳ, ಕೃತಿ ಮತ್ತು ಪ್ರಶಸ್ತಿಗಳ ವಿವರಗಳನ್ನೊಳಗೊಂಡ ಮಿಂಚುಪಟ್ಟಿಗಳನ್ನು ನೀಡುವುದು. ಈ ಅಂಶಗಳನ್ನು ಓದಿಕೊಂಡು ಕವಿ ಗೋಪಾಲಕೃಷ್ಣ ಅಡಿಗರ ಪರಿಚಯವನ್ನು ವಾಕ್ಯರೂಪದಲ್ಲಿ ಮಾಡುವಂತೆ ಸೂಚಿಸುವುದು. | ಕವಿ ಪರಿಚಯವನ್ನು ವಾಕ್ಯರೂಪದಲ್ಲಿ ಬರೆಸುವುದು. |
| | | • ಸರಳ ಭಾಷಾಂಶಗಳನ್ನು ತಿಳಿಯುವುದು | • ಸಂಧಿಪದ, ವಿರುದ್ಧಾರ್ಥಕ ಪದ, ತತ್ಸಮತದ್ಭವ ಪದಗಳನ್ನು ಗುರುತಿಸಿ ಉತ್ತರವನ್ನು ಬರೆಯುವುದು<br>**ಅಭ್ಯಾಸ ಹಾಳೆ 01** | |
| | | • ಸೂಕ್ತ ಸ್ವರಭಾರದೊಂದಿಗೆ ಪದ್ಯವಾಚನ ಮಾಡುವುದು | • ಶಿಕ್ಷಕರು ಪದ್ಯಭಾಗವನ್ನು ಮಾದರಿ ವಾಚನ ಮಾಡಿ ನಂತರ ಮಕ್ಕಳಿಂದ ಓದಿಸುವುದು.<br>(ಮಾದರಿ ವಾಚನದ ಆಡಿಯೋ ಕೇಳಿಸುವುದು) | ಪದ್ಯ ಕಂಠಪಾಠ ಮಾಡಿ ಬರೆಯಿರಿ. |
| 02 | ಡಿಸೆಂಬರ್ ಎರಡನೆಯ ವಾರ | • ಪದ್ಯದ ಭಾವಾರ್ಥವನ್ನು ಗ್ರಹಿಸಿ | • ಶಿಕ್ಷಕರು ಪ್ರಶ್ನೋತ್ತರ ವಿಧಾನದ ಮೂಲಕ ಪದ್ಯದ | ಗುರಿ ಪದ್ಯದ ಭಾವಾರ್ಥವನ್ನು |

| | | | | |
|---|---|---|---|---|
| | | ಏನು? ಏಕೆ? ಹೇಗೆ? ಎಂಬ ಪ್ರಶ್ನೆಗಳಿಗೆ ಉತ್ತರಿಸುವ ಸಾಮರ್ಥ್ಯ ಬೆಳೆಸುವುದು. | ಭಾವಾರ್ಥವನ್ನು ವಿವರಿಸುವರು. ಪದ್ಯದ ಭಾವಾರ್ಥ ಗ್ರಹಿಸಿ ಮಕ್ಕಳು ಸರಳ ಪ್ರಶ್ನೆಗಳಿಗೆ ಉತ್ತರಿಸುವಂತೆ ಪ್ರೇರೇಪಿಸುವುದು. | ನಿಮ್ಮ ಮಾತುಗಳಲ್ಲಿ ಬರೆಯಿರಿ. |
| | | • ಜೀವನ ಮೌಲ್ಯಗಳನ್ನು ಅರಿಯುವುದು | • ಪದ್ಯದಲ್ಲಿ ವ್ಯಕ್ತವಾಗಿರುವ ಮೌಲ್ಯಗಳನ್ನು ಪಟ್ಟಿ ಮಾಡಿಸುವುದು. | |
| | | **ಕಾಫಿ– ಕಪ್ಪು**<br>• ಪ್ರಸಿದ್ಧವಾದ ಅಂಕಣ ಬರೆಹಗಳನ್ನು ಪರಿಚಯಿಸುವುದು. | • ಪತ್ರಿಕೆಗಳಲ್ಲಿ ಬರುವ ವಿವಿಧ ಲೇಖಕರಅಂಕಣ ಬರೆಹಗಳನ್ನು ಸಂಗ್ರಹಿಸುವ ಚಟುವಟಿಕೆ ಮಾಡಿಸುವುದು. | |
| | | • ಆಲಿಸಿದ ವಿಷಯವನ್ನು ಗ್ರಹಿಸುವುದು. | • ಗುರುರಾಜ ಕರ್ಜಗಿಯವರ ಕರುಣಾಳು ಬಾ ಬೆಳಕೆ ಬಾನುಲಿ ಕಾರ್ಯಕ್ರಮದ ಧ್ವನಿಸುರುಳಿಯನ್ನು ಕೇಳಿಸುವುದು. | |
| | | • ಆಲಿಸಿ ಗ್ರಹಿಸಿದ ಅಂಶಗಳನ್ನು ವಾಕ್ಯರೂಪದಲ್ಲಿ ಬರೆಯುವುದು. | • ಲೇಖಕರನ್ನು ಪರಿಚಯಿಸುವ ಆಡಿಯೋ ಕೇಳಿಸುವುದು. ಕೇಳಿದ ಅಂಶಗಳನ್ನು ಗ್ರಹಿಸಿ ವಾಕ್ಯರೂಪದಲ್ಲಿ ಲೇಖಕರ ಪರಿಚಯ ಬರೆಯುವಂತೆ ಸೂಚಿಸುವುದು. | |
| 03 | ಡಿಸೆಂಬರ್ ಮೂರನೆಯ ವಾರ | • ಸರಳ ಭಾಷಾಂಶಗಳನ್ನು ಅರಿಯುವುದು. | • ಗದ್ಯಭಾಗದಲ್ಲಿ ಬಂದಿರುವ ಹೊಸಪದಗಳನ್ನು ಗುರುತಿಸಿ ನಿಘಂಟಿನ ಸಹಾಯದಿಂದ ಅರ್ಥವನ್ನು ತಿಳಿಯುವರು.<br>• ಅಭ್ಯಾಸ ಹಾಳೆಗಳ ಮೂಲಕ ಜೋಡುನುಡಿ, ದ್ವಿರುಕ್ತಿ, ಅನುಕರಣಾವ್ಯಯಗಳು ಮತ್ತು ಸಮಾಸ ಪದಗಳನ್ನು ಪರಿಚಯಿಸುವುದು.<br>**ಅಭ್ಯಾಸ ಹಾಳೆ–02** | |
| | | • ಸಂಭಾಷಣೆಗಳನ್ನು ರಚಿಸುವ ಸಾಮರ್ಥ್ಯ ಬೆಳೆಸುವುದು. | ಗದ್ಯಭಾಗವನ್ನು ಆಧರಿಸಿ ಸೂಕ್ತ ಸಂಭಾಷಣೆ ರಚಿಸಿ, ನಾಟಕ ರೂಪದಲ್ಲಿ ಅಭಿನಯಿಸುವಂತೆ ಪ್ರೇರೇಪಿಸುವುದು. | |
| | | • ಗದ್ಯಭಾಗದ ಮುಖ್ಯಾಂಶಗಳನ್ನು | • ಗದ್ಯಭಾಗದಲ್ಲಿರುವ ಮುಖ್ಯಾಂಶಗಳನ್ನು ತಮ್ಮಜೀವನಕ್ಕೆ | |

| | | | | |
|---|---|---|---|---|
| | | ಚರ್ಚಿಸಿ ಪಾಠವನ್ನು ಅರ್ಥೈಸಿಕೊಳ್ಳುವುದು. | ಅನ್ವಯಿಸಿ ವಿವರಿಸುವಂತೆ ಮಕ್ಕಳಿಗೆ ಪ್ರೇರೇಪಿಸುವುದು. ಈ ಮೂಲಕ ಪಾಠಭಾಗದಲ್ಲಿ ಬಂದಿರುವ ಮೌಲ್ಯಗಳ ಮಹತ್ವವನ್ನು ತಿಳಿಸುವುದು. | |
| | | • ಪ್ರಬಂಧ ಬರೆಯುವ ಸಾಮರ್ಥ್ಯ ಬೆಳೆಸುವುದು. | ಸರಳ ವಿಷಯಗಳನ್ನು ನೀಡಿ ಪ್ರಬಂಧ ಬರೆಯುವಂತೆ ಮಕ್ಕಳನ್ನು ಪ್ರೇರೇಪಿಸುವುದು | |
| | ಡಿಸೆಂಬರ್ ನಾಲ್ಕನೆಯ ವಾರ | **ಮೂಡಲ್‌ಕುಣಿಗಲ್‌ಕೆರೆ**<br>• ಜನಪದ ಸಾಹಿತ್ಯದ ಪ್ರಕಾರಗಳನ್ನು ಅರಿಯುವುದು. | ಜನಪದಕಥೆ, ಗಾದೆ, ಒಗಟು ಮತ್ತು ಜನಪದ ಗೀತೆಗಳನ್ನು ಉದಾಹರಣೆಗಳ ಮೂಲಕ ಪರಿಚಯಿಸುವುದು. ಸ್ಥಳೀಯವಾಗಿ ಲಭ್ಯವಿರುವ ಜನಪದ ಗೀತೆಗಳನ್ನು ಸಂಗ್ರಹಿಸಿ ಹಾಡುವಂತೆ ಮಕ್ಕಳನ್ನು ಪ್ರೇರೇಪಿಸುವುದು. | |
| | | • ಸರಳ ಭಾಷಾಂಶಗಳನ್ನು ಅರಿಯುವರು. | • ಆಡುಭಾಷೆಯ ಪದಗಳಿಗೆ ಗ್ರಾಂಥಿಕರೂಪ ಬರೆಯುವುದು ಹಾಗೂ ಅಲಂಕಾರ ವಾಕ್ಯಗಳನ್ನು ಸಮನ್ವಯಗೊಳಿಸುವ ವಿಧಾನವನ್ನು ಅಭ್ಯಾಸ ಹಾಳೆಯ ಮೂಲಕ ಪರಿಚಯಿಸುವುದು.<br>**ಅಭ್ಯಾಸ ಹಾಳೆ – 03** | |
| | | • ಜನಪದಗೀತೆಯನ್ನು ರಾಗವಾಗಿ ಹಾಡುವುದು. | • ಮೂಡಲ್ ಕುಣಿಗಲ್‌ಕೆರೆ ಜನಪದಗೀತೆಯ ಧ್ವನಿಸುರುಳಿಯನ್ನು ಕೇಳಿಸುವುದು.<br>• ವಿದ್ಯಾರ್ಥಿಗಳಿಂದ ಸಾಮೂಹಿಕವಾಗಿ ಹಾಡಿಸುವುದು. | |
| | | • ಜನಪದಗೀತೆಯ ಭಾವಾರ್ಥವನ್ನು ತಮ್ಮ ಮಾತುಗಳಲ್ಲಿ ಅಭಿವ್ಯಕ್ತಿಸುವುದು. | • ಪದ್ಯವನ್ನು ಓದಿ ಭಾವಾರ್ಥವನ್ನು ಅರಿತು ತನ್ನ ಮಾತುಗಳಲ್ಲಿ ವಿವರಿಸುವಂತೆ ಮಕ್ಕಳಿಗೆ ಪ್ರೇರೇಪಿಸುವುದು. | ಮೂಡಲ್ ಕುಣಿಗಲ್‌ಕೆರೆ ಪದ್ಯದ ಭಾವಾರ್ಥವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. |

## ಅಭ್ಯಾಸ ಹಾಳೆ 01

## ಗುರಿ

- **ಈ ಕೆಳಗೆ ನೀಡಿರುವ ಸಂಧಿಪದಗಳನ್ನು ಬಿಡಿಸಿ ಸಂಧಿಯನ್ನು ಹೆಸರಿಸಿ.**

**ಮಾದರಿ:** ಅಳಿಯಾಸೆ = ಅಳಿ + ಆಸೆ (ಆಗಮ ಸಂಧಿ)
ಆಳ್ವೆಸ = ಆಳ್ + ಬೆಸ (ಆದೇಶ ಸಂಧಿ)

| ಸಂಧಿ ಪದ | ಬಿಡಿಸುವಕ್ರಮ | ಸಂಧಿಯ ಹೆಸರು |
|---|---|---|
| ದೇಹದೊಳಾತ್ಮ | | |
| ಜೀವನಕೇಕೆ | | |
| ಹಿಡಿದೊಳ್ದಾರಿ | | |
| ಹಗಲಿರುಳು | | |
| ಕೆಸರೊಳಿದ್ದರೂ | | |
| ಶರಣೆಂಬೆ | | |
| ತಿರೆಯೊಳಗೆ | | |
| ಬಂದೊಡನೆ | | |

- **ಈ ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಸೂಕ್ತವಾಗಿ ಹೊಂದಿಸಿ ಬರೆಯಿರಿ**

| | | |
|---|---|---|
| ಆಸೆ | ವೀರ | |
| ಪರಹಿತ | ನಿರಾಸೆ | |
| ಇರುಳು | ಸ್ವಹಿತ | |
| ಹೇಡಿ | ಹಗಲು | |

- **ಈ ಕೆಳಗೆ ನೀಡಿರುವತತ್ಸಮತದ್ಭವ ಪದಗಳನ್ನು ಓದಿ ಸೂಕ್ತ ತತ್ಸಮತದ್ಭವ ಜೋಡಿಗಳನ್ನು ಜೋಡಿಸಿ ಬರೆಯಿರಿ**

  **ತಿರೆ, ವೀರ, ವಶ, ಸ್ಥಿರಾ, ಬಸ, ಬೆಸನ, ಬೀರ,ಮುಖ, ಕಾರ್ಯ, ವ್ಯಸನ, ಕಜ್ಜ, ಮೊಗ**

| | | | | |
|---|---|---|---|---|
| | | | | |
| | | | | |
| | | | | |

## ಅಭ್ಯಾಸ ಹಾಳೆ : 2

### ಕಾಫಿ – ಕಪ್ಪು

➢ **ಈ ಕೆಳಗಿನ ಪದಗಳನ್ನು ಅವುಗಳ ವಿಧಕ್ಕೆ ಅನುಗುಣವಾಗಿ ಹೊಂದಿಸಿ ಬರೆಯಿರಿ .**

| | | | | | |
|---|---|---|---|---|---|
| ಬಿಸಿಬಿಸಿ | ಸರಮಾಲೆ | ಲಟಲಟ | ಬೇಗಬೇಗ | ಕಟ್ಟಕಡೆಯ | ಧಗಧಗ |
| ನೋವುನಲಿವು | ಪಟಪಟ | ಚಿಲಿಪಿಲಿ | ಬೇವುಬೆಲ್ಲ | ಉಪ್ಪುಪ್ಪು | ಕುಹೂಕುಹೂ |
| ಲಟಲಟ | ಕಸಕಡ್ಡಿ | ಗರ್‍ರಗರ್‍ರ | ದೊಡ್ಡದೊಡ್ಡ | ಬೇರೆಬೇರೆ | ಜುಳುಜುಳು |
| ಮನೆಮಠ | ಚಿಕ್ಕಚಿಕ್ಕ | ತುತ್ತತುದಿ | ಸಂದಿಗೊಂದಿ | ಸರಸರ | ಬಿಸಿಬಿಸಿ |

| **ದ್ವಿರುಕ್ತಿ** | **ಅನುಕರಣಾವ್ಯಯ** | **ಜೋಡುನುಡಿ** |
|---|---|---|
| | | |

➢ **ಈ ಕೆಳಗಿನ ಸಮಾಸ ಪದಗಳನ್ನು ಅವುಗಳ ವಿಧದೊಂದಿಗೆ ಹೊಂದಿಸಿ ವಿಗ್ರಹವಾಕ್ಯ ಮಾಡಿ ಬರೆಯಿರಿ.**

| | | | |
|---|---|---|---|
| ಮರಗಾಲು | ಒಗ್ಗಟ್ಟು | ಕೆರೆಕಟ್ಟೆ | ಕೈಬೀಸು |
| ಅಂಗೈ | ಅರಮನೆ | ಹೊಸಗನ್ನಡ | ಆ ಹುಡುಗ |
| ಸಪ್ತಸಾಗರಗಳು | ತುದಿನಾಲಗೆ | ಲಕ್ಷ್ಮೀಶ | ಹೆಗ್ಗುರಿ |
| ಮುಕ್ಕಣ್ಣ | ಲವಕುಶ | ಕಣ್ಣು ತೆರೆದನು | ಮಾಡಿದಡಿಗೆ |

| | | |
|---|---|---|
| ತತ್ಪುರುಷ ಸಮಾಸ | ಮರಗಾಲು | ಮರದ + ಕಾಲು |
| | ಅರಮನೆ | ಅರಸನ + ಮನೆ |
| ಕರ್ಮಧಾರಯ ಸಮಾಸ | | |
| | | |
| ದ್ವಿಗು ಸಮಾಸ | | |
| | | |
| ಅಂಶಿ ಸಮಾಸ | | |
| | | |
| ದ್ವಂದ್ವ ಸಮಾಸ | | |
| | | |
| ಬಹುವ್ರೀಹಿ ಸಮಾಸ | | |
| | | |
| ಕ್ರಿಯಾ ಸಮಾಸ | | |
| | | |
| ಗಮಕ ಸಮಾಸ | | |
| | | |

## ಅಭ್ಯಾಸ ಹಾಳೆ – 3

## ಮೂಡಲ್ ಕುಣಿಗಲ್ ಕೆರೆ

➢ **ಈ ಕೆಳಗಿನ ಪದಗಳಿಗೆ ಗ್ರಾಂಥಿಕ ರೂಪವನ್ನು ಬರೆಯಿರಿ.**

**ಮಾದರಿ :** ನೋಡೋರ್ಗೆ – ನೋಡುವವರಿಗೆ

| | | | | |
|---|---|---|---|---|
| ಬರ್ತಾನೆ | | | ಹಾದೀಲಿ | |
| ಚೆಂದಿರ | | | ತಂದಾನೆ | |
| ಕೆರೆಯಾಗೆ | | | ನೀರಿಲ್ದ | |
| ಹ್ಯಾಂಗ | | | ಅಂತಾರ | |
| ಹೋಗ್ಯಾವ | | | ಬರ್ತೈತಲ್ಲ | |

➢ **ಈ ಕೆಳಗಿನ ಅಲಂಕಾರ ವಾಕ್ಯವನ್ನು ಮಾದರಿಯಂತೆ ಸಮನ್ವಯಗೊಳಿಸಿ ಬರೆಯಿರಿ.**

| | |
|---|---|
| **ನಿಂಬೆಯ ಹಣ್ಣಿನಂತೆ ತುಂಬಿದ ಕುಣಿಗಲ್ ಕೆರೆ** | |
| **ಅಲಂಕಾರ** ಉಪಮಾ ಅಲಂಕಾರ | |
| **ಲಕ್ಷಣ –** ಎರಡು ವಸ್ತು ಅಥವಾ ಸನ್ನಿವೇಶಗಳಿಗೆ ಪರಸ್ಪರ ಹೋಲಿಕೆಯನ್ನು ಮಾಡಿ ವರ್ಣಿಸಿದರೆ ಅದು ಉಪಮಾಲಂಕಾರ ಎಂದೆನಿಸುತ್ತದೆ. | |
| ಉಪಮೇಯ | ಕುಣಿಗಲ್ ಕೆರೆ |
| ಉಪಮಾನ | ನಿಂಬೆಯ ಹಣ್ಣು |
| ಉಪಮಾವಾಚಕ | ಅಂತೆ |
| ಸಮಾನಧರ್ಮ | ತುಂಬಿರುವುದು |
| ಸಮನ್ವಯ : ಇಲ್ಲಿ ಉಪಮೇಯವಾದ ಕುಣಿಗಲ್ ಕೆರೆಯನ್ನು ಉಪಮಾನವಾದ ನಿಂಬೆಯ ಹಣ್ಣಿಗೆ ಹೋಲಿಸಿ ವರ್ಣಿಸಲಾಗಿದೆ. ಆದ್ದರಿಂದ ಇದು ಉಪಮಾಲಂಕಾರ. | |

| | |
|---|---|
| **ಬಾಳೆಯ ಹಣ್ಣಿನಂತೆ ಬಾಗಿದ ಕುಣಿಗಲ್ ಕೆರೆ** | |
| **ಅಲಂಕಾರ** | |
| **ಲಕ್ಷಣ –** | |
| ಉಪಮೇಯ | |
| ಉಪಮಾನ | |
| ಉಪಮಾವಾಚಕ | |
| ಸಮಾನಧರ್ಮ | |
| ಸಮನ್ವಯ : | |